ರಾಧಾ ನನ್ನ ಜೊತೆಯಾಗಿಯೇ ಸಾಗಿದವಳು. ಎಲ್ಲಿಯವರೆಗೆ ಎಂದರೆ - ಮುಂದಿನ ಜೀವನ ಹೇಗೆ, ಏನು ಎತ್ತ ಎಂಬುದರ ಬಗ್ಗೆ ಹೆಚ್ಚೇನೂ ಯೋಚನೆ ಮಾಡದೇ ಅವಳು ನನ್ನನ್ನು ಅನುಸರಿಸಿ ಬಂದಳು. ಅದನ್ನು ಹೇಳಬೇಕಾದರೆ, ನನ್ನ ಮದುವೆಯ ಕಥೆಯನ್ನು ಹೇಳಬೇಕು. ನಮ್ಮದು ಬಾಲ್ಯವಿವಾಹ. ಹಾಗಾಗಿ ಮದುವೆಯದು ಅಂತಹ ವಿಶೇಷ ಕಥೆಯೇನೂ ಇಲ್ಲವೆನ್ನಿ. ಆದರೆ, ಅವಳಿಗೆ 15 ವರ್ಷ ತುಂಬುವಷ್ಟರಲ್ಲಿ, ಇನ್ನೇನು ತವರುಮನೆಯಿಂದ ಆಕೆಯನ್ನು ನನ್ನ ಮನೆಗೆ ಕಳುಹಿಸಿ ಕೊಡುವ ಹಂತ ಬಂದಾಗ, ಅವಳ ತಂದೆಗೆ ನನ್ನ ಬಗ್ಗೆ ಅಸಮಾಧಾನ ಉಂಟಾಯಿತು. 'ನಮ್ಮ ಸಮುದಾಯಕ್ಕೆ ಅಪಮಾನಕಾರಿಯಾದ ನೃತ್ಯವನ್ನು ಕಲಿಯುತ್ತ ಇರುವ ಈ ಮನುಷ್ಯ ನನ್ನ ಮಗಳಿಗೆ ಊಟ ಹಾಕಿಯಾನೇ' ಎಂಬ ಅಳುಕು ಅವರದ್ದು. ಹಾಗಾಗಿ ಆಗಿರುವ ಮದುವೆಯನ್ನು ಮುರಿದು ಡಿವೋರ್ಸ್ ತೆಗೆದುಕೊಂಡು ಮಗಳನ್ನು ಬೇರೆ ವರನಿಗೆ ಕೊಟ್ಟರೆ ಹೇಗೆ ಎಂದು ಯೋಚಿಸುತ್ತಿದ್ದರು. ಅಷ್ಟರಲ್ಲೇ ನಾವಿಬ್ಬರೂ ನೃತ್ಯದ ಗುಂಗಿಗೆ ಬಿದ್ದಿದ್ದೆವಲ್ಲ. ಒಂದು ದಿನ ರಾತ್ರಿ ಎಲ್ಲರೂ ಮಲಗಿದ್ದಾಗ ನಾವಿಬ್ಬರೂ ಮನೆಬಿಟ್ಟು ರೈಲ್ವೇ ಸ್ಟೇಷನ್‌ಗೆ ಹೋಗಿ ಹೈದರಾಬಾದ್‌ಗೆ ಹೊರಟೆವು. ಮುಂದಿನ ಬಾಳುವೆಯ ಬಗ್ಗೆ ಆಕೆಯಲ್ಲಿ ಯಾವುದೇ ಕಲ್ಪನೆಯಿರಲಿಲ್ಲ. ನಾವಿಬ್ಬರೂ ನೃತ್ಯ ಕಲಿಯಬೇಕು ಎಂಬುದಷ್ಟೇ ನಮ್ಮ ಮನಸ್ಸಿನಲ್ಲಿತ್ತು. ಮದುವೆಯಾದವರೂ ಓಡಿಹೋಗುವ ಕಥೆ ಎಲ್ಲಿಯಾದರೂ ಕೇಳಿದ್ದೀರಾ? ಹಾಗೆ ನಾವು ಹೈದರಾಬಾದ್‌ನಲ್ಲಿ ನೃತ್ಯ ಕಲಿಕೆಯನ್ನು ಆರಂಭಿಸಿದೆವು. ಏಲೂರು ವೇದಾಂತಂ ಪ್ರಹ್ಲಾದ ಶರ್ಮ ಅವರು ನನ್ನ ಗುರುಗಳು. ರಾಧಾ ಕೂಡ ಅವರ ಶಿಷ್ಯೆ. ಆದರೆ ಅವಳು ತರಗತಿಗೆ ಬರುವುದಕ್ಕಿಂತ ಹೆಚ್ಚಾಗಿ ನನ್ನ ಮೂಲಕವೇ ನೃತ್ಯ ಕಲಿತಳು. ಅಲ್ಲಿಂದ ಮುಂದಕ್ಕೆ ಆಂಧ್ರಪ್ರದೇಶ ಸರ್ಕಾರವು 1966ರಲ್ಲಿ ಕೂಚಿಪುಡಿ ಕೊರಿಯೊಗ್ರಫಿಯನ್ನು ಕಲಿಯುವುದಕ್ಕೆ ಫೆಲೋಶಿಪ್ ನೀಡಿ ನಮ್ಮನ್ನು ದೆಹಲಿಗೆ ಕಳುಹಿಸಿತು. ಅಲ್ಲಿ ನಾವು ಗುರು ಮಾಯಾ ರಾವ್ ಅವರ ಮಾರ್ಗದರ್ಶನದಲ್ಲಿ ಕೊರಿಯೊಗ್ರಫಿಯ ಪಾಠಗಳನ್ನು ಕಲಿತೆವು. ನಮ್ಮ ವೈಯಕ್ತಿಕ ಬದುಕಿಗೆ ಮೆರುಗು ದೊರೆಯುವುದಕ್ಕೆ ಮತ್ತು ಕೂಚಿಪುಡಿ ನೃತ್ಯದ ವರ್ಚಸ್ಸು ಬದಲಾಗುವುದಕ್ಕೆ ಈ ದೆಹಲಿವಾಸವೇ ಕಾರಣ ಎಂದರೆ ತಪ್ಪಲ್ಲ. ಅದಿರಲಿ. ಬದುಕಿನಲ್ಲಿ ಜೊತೆಯಾಗಿರುವ ರಾಧಾ ವೇದಿಕೆಯಲ್ಲಿಯೂ ನನ್ನ ಸಹಚರಿ. ವೇದಿಕೆ ಮೇಲೆ ನಾನು ಪುರುಷನಾಗಿ, ಆಕೆ ಪ್ರಕೃತಿಯಾಗಿ ಹೆಜ್ಜೆ ಹಾಕುತ್ತೇವೆ. ನಾನು ತಾಂಡವವನ್ನೂ ಆಕೆ ಲಾಸ್ಯವನ್ನೂ ಪ್ರಸ್ತುತಪಡಿಸುತ್ತ, ಸಾಗುತ್ತ ಸಾಗುತ್ತ, ನಾವು ಕೂಚಿಪುಡಿ ನೃತ್ಯ ಪ್ರಕಾರಕ್ಕೆ ಹೊಸ ಆಯಾಮವನ್ನು ಕೊಡುತ್ತಿದ್ದೇವೆ ಎಂಬ ಅರಿವು ಆಗ ನಮಗೆ ಇರಲಿಲ್ಲ. ಪ್ರದರ್ಶನ ಚೆನ್ನಾಗಿ ಆಗಬೇಕು ಎಂದಷ್ಟೇ ನಿರಂತರ ಶ್ರಮಿಸುತ್ತಿದ್ದೆವು. ಅಹೋರಾತ್ರಿ ಪ್ರಾಕ್ಟೀಸ್ ಮಾಡುತ್ತಿದ್ದೆವು. ನಮ್ಮ ಪರಂಪರೆಯನ್ನು ಬಿಂಬಿಸುವ ಹೊಸ ಹೊಸ ಪರಿಕಲ್ಪನೆಗಳನ್ನು ರೂಪಿಸುತ್ತಿದ್ದೆವು.

ಕೂಚಿಪುಡಿಯು ಆರಂಭಿಕ ಹಂತದಲ್ಲಿ, ಅಂದರೆ 20ನೇ ಶತಮಾನದ ಆದಿಭಾಗದಲ್ಲಿ ಒಂದು ರಂಗಭೂಮಿ ಕಲಾಪ್ರಕಾರದಂತೆ ಪ್ರದರ್ಶನಗೊಳ್ಳುತ್ತಿತ್ತು. ಅದು ನಗರಗಳ ಮಹಾವೇದಿಕೆಯಲ್ಲಿ ಕಾಣಿಸಿಕೊಂಡದ್ದು ಬಹಳ ಕಮ್ಮಿ. ಆದರೆ ನಗರಗಳಲ್ಲಿ ನಮಗೆ ದೊರೆತ ವೇದಿಕೆಗಳಲ್ಲಿ ಈ ರಂಗಭೂಮಿ ಮಾದರಿಯ ಪ್ರಸ್ತುತಿಯನ್ನು ಮಾಡುವುದು ಸಾಧ್ಯವಿರಲಿಲ್ಲ. ರಂಗಕ್ಕೆ ಅಳವಡಿಸುವುದಕ್ಕೆ ಹೊಸದೊಂದು ಕೌಶಲ ಬೇಕಿತ್ತು. ಪ್ರವೇಶ, ಕ್ಲೈಮ್ಯಾಕ್ಸ್, ಸಮಾರೋಪ ಎಂಬ ಒಂದು ಚೌಕಟ್ಟು ಬೇಕಿತ್ತು. ಈ ತಂತ್ರವನ್ನು ಆಧರಿಸಿ ಪ್ರದರ್ಶನವನ್ನು ಸಿದ್ಧಪಡಿಸಲು, ನಾನು ದೆಹಲಿಯಲ್ಲಿ ಕಲಿತ ಕೊರಿಯೊಗ್ರಫಿ ಬಹಳ ಸಹಾಯಕ್ಕೆ ಬಂತು. ಈ ಎಲ್ಲ ಸಾಧನೆ ಶ್ರಮಗಳ ಹಿಂದೆ ರಾಧಾಳ ಕೊಡುಗೆ ಇದೆ. ಹಿತ್ತಲ ಗಿಡ ಮದ್ದಲ್ಲ ಎಂಬಂತೆ ಆಕೆಯ ಪ್ರತಿಭೆಯಾಗಲೀ, ಶ್ರಮವಾಗಲೀ ನನ್ನ ಗಮನಕ್ಕೆ ಬರಲಿಲ್ಲ. ಒಮ್ಮೆ ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರು ನಮ್ಮಿಬ್ಬರ ನೃತ್ಯ ಪ್ರದರ್ಶನವನ್ನು ನೋಡಿ ಬಹಳವೇ ಮೆಚ್ಚಿಕೊಂಡರು. ಜವಾಹರ್‌ಲಾಲ್ ನೆಹರೂಅವರ ಹುಟ್ಟುಹಬ್ಬದ ಆಚರಣೆ ಸಂದರ್ಭದಲ್ಲಿ ನಾವು ನೃತ್ಯ ಮಾಡಿದ್ದೆವು. ಪ್ರದರ್ಶನ ಮುಗಿದ ಬಳಿಕ ಕರತಾಡನದ ಜೋರು ಸದ್ದಿನ ನಡುವೆ ಖುದ್ದಾಗಿ ಎದ್ದು ಬಂದ ಇಂದಿರಾ ಗಾಂಧಿ, ತಮ್ಮ ಶಾಲನ್ನು ನಮ್ಮ ಕೊರಳಿಗೆ ಹಾಕಿದರು. 'ನೀವಿಬ್ಬರೂ ದೇಹವೆರಡು ಭಾವವೊಂದು ಎಂಬಂತೆ ನರ್ತಿಸಿದ್ದೀರಿ. ನೀವು ರಾಜಾ ರೆಡ್ಡಿ ರಾಧಾ ರೆಡ್ಡಿ ಎಂದು